# ಜೀವನಶೈಲಿ ಬದಲಾಯಿಸಿದ ಕೊರೊನಾ ವೈರಸ್

ಇದ್ದಕ್ಕಿದ್ದಂತೆ ಸ್ಫೋಟಗೊಂಡ ಕೊರೊನಾ ಸೋಂಕು ವಿಶ್ವದಾದ್ಯಂತ ಜನರ ಜೀವನಶೈಲಿಯನ್ನೇ ಬದಲಾಯಿಸಿತು. ಕಚೇರಿಗಳಿಗೆ ಹೋಗಬೇಕಾಗಿದ್ದ ನೌಕರರು ಮನೆಯಲ್ಲಿ ಉಳಿದು ಕೆಲಸ ಮಾಡುವಂತಾಯಿತು. ಶಾಲೆಗಳು ಮುಚ್ಚಿದವು. ಮನರಂಜನಾ ಕೇಂದ್ರಗಳಿಗೆ ಬೀಗ ಬಿತ್ತು. ಸಿನಿಮಾ, ನಾಟಕ, ಸಂಗೀತ, ಕ್ರೀಡೆ, ಎಲ್ಲವೂ ಸ್ತಬ್ಧ ಸ್ತಬ್ಧ. ಆಸ್ಪತ್ರೆಗಳಷ್ಟೇ ತೆರೆದಿದ್ದವು. ರೈತರು ಹೊಲ ಗದ್ದೆಗಳ ಬಳಿ ಸುಳಿಯುವುದನ್ನು ಕಡಿಮೆ ಮಾಡಿದರು. ಆದರೆ, ಬೆಳೆ ಬೆಳೆಯುವುದನ್ನು ನಿಲ್ಲಿಸಲಿಲ್ಲ. ತರಕಾರಿ ಮಾರುವ ಕಾರ್ಪೊರೇಟ್ ಕಂಪನಿಗಳು ಜನರ ಇನ್ನಿತರ ಅಗತ್ಯಗಳನ್ನು ಪೂರೈಸತೊಡಗಿದವು. ಜನರ ಜೀವ ರಕ್ಷಣೆಗೆ ಮುಂದಾದ ಸರ್ಕಾರಗಳು ಆರ್ಥಿಕ ಭದ್ರತೆ ಕಾಪಾಡಿಕೊಳ್ಳಲು ಹಲವು ಹೊಸ ಉಪಕ್ರಮ, ಯೋಜನೆಗಳನ್ನು ಜಾರಿಗೆ ತಂದವು.

ಮನೆಯಿಂದಲೇ ಆಫೀಸು ಕೆಲಸ ಮಾಡುವುದು, ಶಾಲಾ ಮಕ್ಕಳು ಮನೆಯಿಂದಲೇ ಪಾಠ ಕೇಳುವುದು, ಕಂಪನಿಯ ಮೀಟಿಂಗ್‌ಗಳು ಡಿಜಿಟಲ್ ಮಾಧ್ಯಮದಲ್ಲಿ ನಡೆಯಲು ಶುರುವಾದವು. ಅವಕಾಶಕ್ಕಾಗಿ ಕಾಯುತ್ತಿದ್ದ ತಂತ್ರಜ್ಞಾನದ ಪರಿಕರಗಳು, ಸಾಧನಗಳು ಮತ್ತು ವಿಧಾನಗಳು ಮನೆಮನೆಗೂ ಬಂದವು. ಮಾಹಿತಿ ತಂತ್ರಜ್ಞಾನ ಕಂಪನಿಗಳು ದತ್ತಾಂಶ ಸಂಗ್ರಹಣೆಗೆ ಮುಂದಾದವು. ಎಂಜಿನಿಯರಿಂಗ್ ಮತ್ತು ಪದವಿ ಕಾಲೇಜುಗಳಲ್ಲಿ ಡೇಟಾ ಸೈನ್ಸ್ ಓದಿಗೆ ವಿದ್ಯಾರ್ಥಿಗಳು ಮುಗಿಬೀಳತೊಡಗಿದರು. ಸೋಂಕಿನ ಭಯದಿಂದ ಸೋಶಿಯಲ್ ಡಿಸ್ಟೆನ್ಸ್ ಪಾಲಿಸಿ ಜಾರಿಗೆ ಬಂದು, ಒಬ್ಬರಿಂದ ಒಬ್ಬರು ದೂರವಾದ ಜನರು ಯಂತ್ರಗಳಿಗೆ ತೀರಾ ಹತ್ತಿರವಾದರು. ವಿದೇಶಿಯರ ರೀತಿಯಲ್ಲಿ ಹಸ್ತಲಾಘವ ಮಾಡುತ್ತಿದ್ದವರು ಎರಡು ಕೈಜೋಡಿಸಿ ಕೈ ಮುಗಿಯುವ ಭಾರತೀಯ ಸಂಸ್ಕೃತಿಗೆ ಹಿಂದಿರುಗಿದರು. ಮಾರ್ಕೆಟಿಂಗ್ ವಿಧಾನಗಳು ಬದಲಾದವು. ಮನೆಯ ವಿದ್ಯುತ್, ಇಂಟರ್ನೆಟ್, ಎಸಿ, ಗ್ಯಾಸ್ ಬಿಲ್ ಏರತೊಡಗಿದವು.

ಲಾಕ್‌ಡೌನ್‌ಗಳಿಂದಾಗಿ ಪೆಟ್ರೋಲ್, ಡೀಸೆಲ್ ಬಳಕೆಯ ಕೋಟ್ಯಂತರ ವಾಹನಗಳು ರಸ್ತೆಗೆ ಇಳಿಯದಿದ್ದರಿಂದ ವಾಯುಮಾಲಿನ್ಯ ಕಡಿಮೆಯಾಯಿತು. ಅಪರೂಪಕ್ಕೆ ಎಂಬಂತೆ ಓಜೋನ್ ಪದರದ ರಂಧ್ರ ಮುಚ್ಚಿಕೊಂಡಿತ್ತು.

ವಿದ್ಯಾರ್ಥಿಗಳು ನಿರ್ಣಾಯಕ ಹಂತದ ಪರೀಕ್ಷೆಗಳನ್ನು ಎದುರಿಸದೆ ಮುಂದಿನ ತರಗತಿಗಳಿಗೆ ಪ್ರವೇಶ ಪಡೆದರು.

ಹೆಚ್ಚಿನ ಕಾಲ ಮನೆಯಲ್ಲಿ ಉಳಿದ, ಆರ್ಥಿಕವಾಗಿ ಸಬಲರಾದ ಜನರು ಯೋಗ, ಧ್ಯಾನ, ವ್ಯಾಯಾಮದ ಮೂಲಕ ಆರೋಗ್ಯ ಸಂಪಾದಿಸಿದರು. ಡಿಜಿಟಲ್ ಮಾಧ್ಯಮದ ಮೂಲಕ ಸಂಗೀತ, ನಾಟಕ ತರಬೇತಿ, ಅಡುಗೆ ತರಗತಿಗಳು ನಡೆಯತೊಡಗಿದವು. ಇ–ಕಾಮರ್ಸ್, ಪ್ಯಾರಾ ಮೆಡಿಕಲ್, ನರ್ಸಿಂಗ್ ಕ್ಷೇತ್ರದಲ್ಲಿ ಉದ್ಯೋಗಾವಕಾಶಗಳು ದುಪ್ಪಟ್ಟುಗೊಂಡವು.

ಲಸಿಕೆ ತಯಾರಿಕಾ ಕಂಪನಿಗಳಿಗೆ ಹಣ ಮಾಡುವುದರ ಜೊತೆಗೆ ಜನರ ಜೀವ ಉಳಿಸುವ ದೊಡ್ಡ ಅವಕಾಶ ಸಿಕ್ಕಿತು.

ಡೈರೆಕ್ಟ್ ಟು ಹೋಂ ವೇದಿಕೆಯ ನಿರ್ಮಾತೃಗಳಿಗೆ ಮನರಂಜನೆಯ ಹೊಸ ಸಾಧ್ಯತೆಗಳು ಗೋಚರಿಸಿದವು. ಕೋವಿಡ್, ಲಾಕ್‌ಡೌನ್, ಆರ್ಥಿಕ ಸಂಕಷ್ಟ, ಸಂಬಂಧ ನಷ್ಟ, ಏಕಾಂಗಿತನ, ಹತ್ತಿರದವರ ಸಾವು ತಂದ ಭರಿಸಲಾಗದ ದುಃಖಗಳ ವಿಷಯಗಳನ್ನಾಧರಿಸಿ ನೂರಾರು ಸಿನಿಮಾ, ವೆಬ್ ಸೀರೀಸ್, ಶಾರ್ಟ್ ಸಿನಿಮಾಗಳು ತಯಾರಾಗಿ ಜನರನ್ನು ರಂಜಿಸಿದವು, ಚಿಂತನೆಗೆ ಹಚ್ಚಿ ಹೊಸ ಬದುಕಿನ ಸಾಧ್ಯತೆಗಳನ್ನು ತೆರೆದು ತೋರಿಸಿದವು. ನೂರಾರು ಹೊಸ ಕಲಾವಿದರು, ನಿರ್ದೇಶಕರು, ತಂತ್ರಜ್ಞರು ಬೆಳಕಿಗೆ ಬಂದರು.

ಇದು ಒಂದು ಮುಖವಾದರೆ ವೈರಸ್ ಸೋಂಕಿನಿಂದ ಕೆಲಸದ ಆರ್ಡರ್‌ಗಳಿಲ್ಲದ ಅನೇಕ ಕಂಪನಿಗಳು ಬಾಗಿಲು ಮುಚ್ಚಿಕೊಂಡವು. 2.7 ಕೋಟಿ ಯುವಕರು ಭಾರತದಲ್ಲಿ ಕೆಲಸ ಕಳೆದುಕೊಂಡರು. ಬೀದಿ ಬದಿಯ ವ್ಯಾಪಾರಿಗಳು, ಚಿಕ್ಕ ಬಂಡವಾಳದ ದಿನಸಿ ಅಂಗಡಿಗಳು, ಹೋಟೆಲ್ ಉದ್ಯಮಗಳು, ಮಲ್ಟಿಪ್ಲೆಕ್ಸ್ ಸಿನಿಮಾ ಮಂದಿರಗಳು ಕೋಟ್ಯಂತರ ರೂಪಾಯಿ ನಷ್ಟ ಅನುಭವಿಸಿದವು. ಜಗಮಗಿಸುತ್ತಿದ್ದ ಶಾಪಿಂಗ್ ಮಾಲ್‌ಗಳು ಮಂಕಾಗಿ ಬಾಗಿಲು ಹಾಕಿಕೊಂಡವು.

ಅನೇಕ ದೇಶಗಳ ಜಿಡಿಪಿ ನೆಲಕಚ್ಚಿತ್ತು. ಆಹಾರ, ಲಸಿಕೆಗಳು ಸಿಗದೆ ಅನೇಕ ಬಡ ದೇಶಗಳಲ್ಲಿ ಹಾಹಾಕಾರ ಶುರುವಾಗಿತ್ತು. ಸಿರಿವಂತ ದೇಶಗಳು ಸಹಾಯಹಸ್ತ ಚಾಚಿದ್ದರಿಂದ ಬಡ ದೇಶಗಳು ಬದುಕುಳಿದವು. ಸೋಂಕಿನಿಂದ ಮೃತರಾದವರನ್ನು ನೋಡಲು ಶವಸಂಸ್ಕಾರ ಮಾಡಲು ಹತ್ತಿರದ ಬಂಧುಗಳೇ ಬರಲಿಲ್ಲ. ಅಪ್ಪ–ಮಗ, ಅಣ್ಣ–ತಮ್ಮ ಎನ್ನುವ ಮಮಕಾರದ ಯಾವ ಕರುಳಬಳ್ಳಿಯು ನಳನಳಿಸಲಿಲ್ಲ. ಜನಮನ ರಂಜಿಸಿದ್ದ ಹಲವು ಸೆಲೆಬ್ರಿಟಿಗಳು ಭೌತಿಕವಾಗಿ ಕಣ್ಮರೆಯಾದರು.

ಚಿಕ್ಕದಾಗಿರುವ ವೈರಸ್‌ಗಳಲ್ಲಿ ಎರಡು ಅಥವಾ ಮೂರು ಭಾಗಗಳಿರುತ್ತವೆ. ವಂಶವಾಹಿಯುಕ್ತ ಭಾಗ, ಪ್ರೊಟೀನ್ ಭಾಗ ಮತ್ತು ಅದರ ಸುತ್ತ ಮೇದಸ್ಸಿನ ಹೊದಿಕೆ ಇರುತ್ತದೆ. ಆದರೆ ರೈಬೊಸೋಮ್‌ಗಳಿರುವುದಿಲ್ಲ. ಕಾರಣದಿಂದಾಗಿ ವೈರಸ್‌ಗಳಿಗೆ ಪ್ರೊಟೀನ್ ಉತ್ಪಾದನೆ ಸಾಧ್ಯವಾಗುವುದಿಲ್ಲ.

ಯಾವುದೇ ವೈರಸ್ ದೇಹ ಪ್ರವೇಶಿಸಿದ ತಕ್ಷಣ ದೇಹದ ಪ್ರತಿರೋಧಕ ರಕ್ಷಣಾ ವ್ಯವಸ್ಥೆಯು ಪ್ರತಿಕ್ರಿಯೆ ತೋರಲು ಸನ್ನದ್ಧವಾಗುತ್ತದೆ. ವೈರಸ್‌ನ ದಾಳಿಯನ್ನು ಎದುರಿಸಲು ಜೀವಕೋಶಗಳನ್ನು ಸಜ್ಜುಗೊಳಿಸುತ್ತದೆ. ದೇಹ ಪ್ರವೇಶಿಸುವ ವೈರಸ್‌ಗಳಿಗೆ ಅಂಟಿಕೊಳ್ಳುವ ಪ್ರತಿಕಾಯಗಳನ್ನು ಎದುರಿಸಿ ವೈರಸ್‌ನ ಸಾಮರ್ಥ್ಯವನ್ನು ಕುಗ್ಗಿಸುತ್ತದೆ. ವೈರಸ್‌ಗಳನ್ನು ನಾಶಪಡಿಸಲು 'ಟಿ' ಜೀವಕೋಶಗಳು ಮುಂದಾಗುತ್ತವೆ. ದೊಡ್ಡ ಯುದ್ಧವೇ ನಡೆಯುತ್ತದೆ. ಕೊನೆಗೆ ಗೆಲ್ಲುವುದು ಪ್ರತಿಕಾಯಗಳೇ. ಸೋತಾಗ ಸೋಂಕು ತಗಲಿದ ವ್ಯಕ್ತಿ, ಪ್ರಾಣಿ–ಪಕ್ಷಿಗಳು ಪ್ರಾಣ ತ್ಯಜಿಸುತ್ತವೆ.

ಮಾರಣಾಂತಿಕ ಎಚ್‌ಐವಿ ಮತ್ತು ನ್ಯೂರೋ ಟ್ರೋಫಿಕ್ ವೈರಸ್‌ಗಳು ದೇಹದ ಪ್ರತಿಕಾಯ ವ್ಯವಸ್ಥೆಯನ್ನು ಯಾಮಾರಿಸಿ ಆಕ್ರಮಣ ಮಾಡುತ್ತವೆ. ಪೋಲಿಯೊ, ರೇಬಿಸ್, ದಡಾರವನ್ನುಂಟು ಮಾಡುವ ವೈರಸ್‌ಗಳು ನೇರವಾಗಿ ನರಕೋಶಗಳನ್ನು ಪ್ರವೇಶಿಸಿ ಸೋಂಕು ಹಬ್ಬಿಸುತ್ತವೆ. ಕೇಂದ್ರ ನರಮಂಡಲ ವ್ಯವಸ್ಥೆಯು ಗಾಸಿಗೊಳಗಾಗುತ್ತದೆ.



ಪ್ರಾಣಿ, ಪಕ್ಷಿ, ಸಸ್ಯ, ಶಿಲೀಂಧ್ರ, ಬ್ಯಾಕ್ಟೀರಿಯಾಗಳಲ್ಲೆಲ್ಲ ಸೋಂಕು ಉಂಟುಮಾಡುವ ಸೂಕ್ಷ್ಮಜೀವಿ ವೈರಸ್ ಬರಿಯ ಕಣ್ಣಿಗೆ ಕಾಣಿಸುವುದಿಲ್ಲ. ನಮ್ಮ ಸುತ್ತ ಇರುವ ಸೂಕ್ಷ್ಮಾಣುಜೀವಿಗಳ ಪೈಕಿ ಮುಕ್ಕಾಲು ಭಾಗಕ್ಕಿಂತಲೂ ಹೆಚ್ಚಿನವು ನಮಗೆ ನೆರವು ನೀಡಲೆಂದೇ ಇವೆ. ಉಳಿದ ಕಾಲು ಭಾಗದಷ್ಟು ಮಾತ್ರ ಉಪದ್ರವ ನೀಡುತ್ತವೆ. ತಮ್ಮ ಅಸ್ತಿತ್ವಕ್ಕಾಗಿ ಜಾಗ ಹುಡುಕುವಾಗ ಬೇರೆ ಬೇರೆ ಪ್ರಾಣಿಗಳ ಕೋಶ ಪ್ರವೇಶಿಸುತ್ತವೆ. ಅಲ್ಲಿ ಸೋಂಕು ಉಂಟುಮಾಡುತ್ತವೆ. ಸೋಂಕು ತಗಲಿದ ಆ ಪ್ರಾಣಿಗಳ ಮಾಂಸವನ್ನು ನಾವು ಸೇವಿಸುವುದರಿಂದ ನಮಗೂ ಸೋಂಕು ತಗಲುತ್ತದೆ. ಅಂದರೆ ವೈರಸ್‌ಗಳು ನಮ್ಮನ್ನು ಗುರಿಯಾಗಿಟ್ಟುಕೊಂಡು ಯಾವತ್ತೂ ಆಕ್ರಮಣ ಮಾಡುವುದಿಲ್ಲ.

### ಘೋರ ಸಾವಿನ ಕೊಂಡಿ

ಮಾನವ ಕುಲ ವಿಕಾಸವಾದಾಗಿನಿಂದ ಹಲವು ಕಾಲಘಟ್ಟಗಳಲ್ಲಿ ಒಂದಿಲ್ಲೊಂದು ವೈರಸ್‌ನ ಉಪಟಳಕ್ಕೆ ಗುರಿಯಾಗಿ ಅಪಾರ ಸಾವುನೋವುಗಳನ್ನು ಅನುಭವಿಸಿದೆ. ಪ್ಲೇಗ್, ಸಿಡುಬು, ಸ್ಪ್ಯಾನಿಶ್ ಫ್ಲ್ಯೂ, ಎಚ್‌ಐವಿ, ಕೊರೊನಾ